## ಚುಕ್ಕೆರಹಿತ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಜೆ ೬–೯೦ರ ಎರಡನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ ೨೬ ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ ೭–೭೬–೧೬೫ ಪ್ರಶ್ನೆಗಳನ್ನು ಪೊರತುಪಡಿಸಿ ೨೩ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಂದಿನಿ ಲೇಔಟ್‌ನಲ್ಲಿ ಹೌಸಿಂಗ್ ಸ್ಕೀಮ್ ಮಾಡಿರುವ ಬಗ್ಗೆ

೫. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಂದಿನಿ ಲೇಔಟ್‌ನಲ್ಲಿ ಹೌಸಿಂಗ್ ಸ್ಕೀಮ್ ಮಾಡುವುದಕ್ಕೆ ಮದ್ದಿನ ಫ್ಯಾಕ್ಟರಿ (ಜಾರಕ ಬಂಡೆ ಕಾವಲ್) ಸರ್ವೆ ನಂ. ೧೧ರಲ್ಲಿ ಎಷ್ಟು ಜಮೀನು ಸ್ವಾಧೀನ ಮಾಡಿಕೊಳ್ಳಲಾಗಿದೆ ?

ಆ) ಹಾಗಿದ್ದಲ್ಲಿ ಮದ್ದಿನ ಫ್ಯಾಕ್ಟರಿ ಜಮೀನಿನ ವಿಸ್ತೀರ್ಣವೆಷ್ಟು, ಹಾಗೂ ಅದರಲ್ಲಿ ಎಷ್ಟು ಜಮೀನು ಸ್ವಾಧೀನ ಮಾಡಿಕೊಳ್ಳಲಾಗಿದೆ ?

ಇ) ಉಳಿದ ಜಮೀನನ್ನು ಅತಿಕ್ರಮ ಮಾಡಲಾಗಿದೆಯೇ? ಹಾಗಿದ್ದಲ್ಲಿ ವಿವರ ನೀಡುವುದು,

ಈ) ಮದ್ದಿನ ಫ್ಯಾಕ್ಟರಿಯವರಿಗೆ ಬೇರೆ ಕಡೆ ಜಮೀನನ್ನು ನೀಡಲಾಗಿದೆಯೇ ? ಹಾಗಿದ್ದಲ್ಲಿ ಅದರ ವಿಸ್ತೀರ್ಣವೆಷ್ಟು

ಉ) ಮೇಲಿನ ಜಮೀನಿನಲ್ಲಿ ಅತಿಕ್ರಮ ಮಾಡಿರುವವರ ಮೇಲೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ನಂದಿನಿ ಬಡಾವಣೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಗೃಹ ನಿರ್ಮಾಣ ಯೋಜನೆಗಾಗಿ ಸರ್ವೆ ನಂ ೧ ಜಾರಕ ಬಂಡೆ ಕಾವಲ್ ಗ್ರಾಮದಲ್ಲಿ ೧೦೨ ಎಕರೆ ೩೫ ಗುಂಟೆಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ಸದರಿ ಫ್ಯಾಕ್ಟರಿಯ ವಶದಲ್ಲಿದ್ದ ಜಾರಕ ಬಂಡೆ ಕಾವಲ್ ಸರ್ವೆ ನಂ. ೧೧ರಲ್ಲಿ ೧೦೨ ಎಕರೆ ೩೫ ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಮದ್ದಿನ ಫ್ಯಾಕ್ಟರಿಯವರು ಹೊಂದಿದ ಒಟ್ಟು ಜಮೀನುಗಳ ಮಾಹಿತಿ ಲಭ್ಯ ಇಲ್ಲ.

ಇ) ಸ್ವಲ್ಪ ಅತಿಕ್ರಮವಿದೆ. ವಿವರಗಳನ್ನು ನೀಡಲು ಸರ್ವೆ ಮಾಡಬೇಕಾಗುತ್ತದೆ.

ಈ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸದರಿ ಕಾರ್ಖಾನೆಗೆ ಯಾವುದೇ ಬದಲಿ ನಿವೇಶನವನ್ನು ನೀಡಿಲ್ಲ.

ಉ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ ೧೯೭೬ ಕಲಂ ೩೫ (೨) ಪ್ರಕಾರ ಕ್ರಮ ಜರುಗಿಸಲಾಗುತ್ತದೆ.

## ಕೊಳ್ಳೇಗಾಲ ತಾಲ್ಲೂಕಿನ ಮಹದೇಶ್ವರ ಸ್ವಾಮಿ ಬೆಟ್ಟದ ದೇವಸ್ಥಾನದ ಆದಾಯದ ಬಗ್ಗೆ

೯. ಶ್ರೀ ಜಿ. ರಾಜುಗೌಡ (ಹನೂರು).— ಮಾನ್ಯ ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಳ್ಳೇಗಾಲ ತಾಲ್ಲೂಕಿನ ಮಹದೇಶ್ವರ ಸ್ವಾಮಿ ದೇವಾಲಯದ ಆದಾಯದಲ್ಲಿ ಯಾವುದಾದರೂ ಮಠ ಅಥವಾ ಸಂಸ್ಥೆಗೆ ಪಾಲು ದೊರೆಯುತ್ತಿದೆಯೇ ?

ಆ) ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಪಾಲು ಕೊಡಲಾಗುತ್ತಿದೆ ?

ಇ) ಆದಾಯದಲ್ಲಿ ಪಾಲು ಪಡೆಯುವ ಮಠದ ಉತ್ತರಾಧಿಕಾರಿಯವರು ಧರ್ಮದರ್ಶಿಗಳ ಸಮಿತಿಯ ಸದಸ್ಯರಾಗಬಹುದೇ ?

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಇಲ್ಲ, ಆದರೆ ದೇವಾಲಯದಲ್ಲಿ ನಡೆಯುವ ಪ್ರತಿ ಸೇವೆಯಲ್ಲಿ ೦–೫೦ ಪೈಸೆಯಂತೆ ಬಹಳ ಹಿಂದಿನಿಂದಲೂ ಸಾಲೂರು ಮಠಾಧಿಪತಿಗಳಿಗೆ ದಕ್ಷಿಣೆ ನೀಡಲಾಗುತ್ತಿದೆ.

ಆ) ಧಾರ್ಮಿಕ ದತ್ತಿ ಆಯುಕ್ತರ ಆದೇಶ ಸಂಖ್ಯೆ ಎಡಿಎಂ. ೩ ಸಿಆರ್. ೩೪೨/೭೫–೭೬ ದಿನಾಂಕ ೧೧–೯–೧೯೭೯ರ ಪ್ರಕಾರ.

ಇ) ಧರ್ಮದರ್ಶಿ ಸಮಿತಿಯ ಸದಸ್ಯರಾಗಲು ಈ ಸಂಸ್ಥೆಯ ಆಡಳಿತಕ್ಕೋಸ್ಕರ ರೂಪಿಸಿರುವ ಯೋಜನೆ (ಸ್ಕೀಂ)ಯ ಆಡಿಯಲ್ಲಿ ಯಾವುದೇ ನಿಷೇದ ಅಥವಾ ಪ್ರತಿಬಂಧ ಇರುವುದಿಲ್ಲ.

## ರಾಜ್ಯದಲ್ಲಿರುವ ಪೋಲೀಸ್ ಠಾಣೆಗಳ ಸಂಖ್ಯೆಯ ಬಗ್ಗೆ

೧೧; ಶ್ರೀ ಬಿ. ರಮಾನಾಥ್ ರೈ.(ಬಂಟ್ವಾಳ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿರುವ ಪೋಲೀಸ್ ಠಾಣೆಗಳ ಒಟ್ಟು ಸಂಖ್ಯೆ ಎಷ್ಟು ;

ಆ) ಪ್ರಸ್ತುತ ಠಾಣೆಗಳಲ್ಲಿರುವ ಪೋಲೀಸರ ಒಟ್ಟು ಸಂಖ್ಯೆ ಎಷ್ಟು ;

ಇ) ಕಾನೂನು ಮತ್ತು ಆಡಳಿತಾತ್ಮಕ ದೃಷ್ಟಿಯಲ್ಲಿರಬೇಕಾದ ಪೋಲೀಸರ ಸಂಖ್ಯೆ ಎಷ್ಟು ;

ಈ) ಈ ಕಾನೂನಿನ ವ್ಯವಸ್ಥೆಯನ್ನು ಸರಿಯಾಗಿ ನಿರ್ವಹಿಸಲು ಹಾಲಿ ಕೊರತೆ ಇರುವ ಪೋಲೀಸ್ ಸಂಖ್ಯೆಯನ್ನು ಹೆಚ್ಚಿಸಿ ಭರ್ತಿ ಮಾಡುವ ಆಲೋಚನೆ ಸರ್ಕಾರಕ್ಕೆ ಇದೆಯೇ ? ಹಾಗಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ೬೭೮.

ಆ) ೨೫,೯೧೬

ಇ) ನಿಖರವಾದ ಸಂಖ್ಯೆ ತಿಳಿಸಲು ಸಾಧ್ಯವಾಗುವುದಿಲ್ಲ ಪ್ರತಿ ಪೋಲೀಸ್ ಠಾಣೆಯ ಮತ್ತು ಕ್ಷೇತ್ರದ ಅವಶ್ಯಕತೆಯನ್ನು ಆದರದರ ಅರ್ಹತೆಗೆ ತಕ್ಕಂತೆ ಪರಿಶೀಲಿಸಬೇಕಾಗುವುದು.

ಈ) ಕಾನೂನಿನ ವ್ಯವಸ್ಥೆಯನ್ನು ಈಗಲೂ ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ. ಪೋಲೀಸ್ ಠಾಣೆಗಳ ಸಂಖ್ಯೆಯನ್ನು ಹೆಚ್ಚಿಸುವ ಹೊಸ ಪೋಲೀಸ್ ಠಾಣೆಗಳನ್ನು ಸ್ಥಾಪಿಸುವ ಪ್ರಸ್ತಾವನೆಗಳನ್ನು ಪ್ರತ್ಯೇಕವಾಗಿ ಲಭ್ಯವಿರುವ ಸಮಗ್ರ ಸಂಪನ್ಮೂಲಗಳನ್ನು ಅನುಸರಿಸಿ ಪರಿಶೀಲಿಸಲಾಗುತ್ತಿದೆ.

(ದಿನಾಂಕ ೩–೬–೮೦ ರಂದು ಮುಖ್ಯ ಮಂತ್ರಿಗಳಿಂದ ಅನುಮೋದಿಸಲ್ಪಟ್ಟಿದೆ).